International Journal of Kannada Research 2018; 4(3): 07-10

International Journal of Kannada Research
www.kannadajournal.com

ISSN: 2454–5813
IJKR 2018; 4(3): 07-10
© 2018 IJKR
www.kannadajournal.com
Received: 03-05-2018
Accepted: 04-06-2018

**ಶಿವಕೀರ್ತಿ ವಿ.**
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ),
ಮಂಡ್ಯ

**Correspondence**
**ಶಿವಕೀರ್ತಿ ವಿ.**
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ),
ಮಂಡ್ಯ

# ಕ್ರಾಂತಿಯ ನೆಲೆಯಲ್ಲಿ ‘ತಲೆದಂಡ’

**ಶಿವಕೀರ್ತಿ ವಿ.**

ಹನ್ನೆರಡನೆಯ ಶತಮಾನದ ಬಸವಣ್ಣನವರ ನೇತೃತ್ವದ ಐತಿಹಾಸಿಕ ಕ್ರಾಂತಿಯನ್ನಾಧರಿಸಿ ಅನೇಕ ನಾಟಕಗಳು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಬಂದಿವೆ. ಲಂಕೇಶರ ‘ಸಂಕ್ರಾಂತಿ’, ಶಿವಪ್ರಕಾಶರ ‘ಮಹಾಚೈತ್ರ’, ಜಡಭರತರ ‘ನಾನೇ ಬಿಜ್ಜಳ’, ಗಿರೀಶ್ ಕಾರ್ನಾಡರ ‘ತಲೆದಂಡ’ ಚಂದ್ರಶೇಖರ ಕಂಬಾರರ ‘ಶಿವರಾತ್ರಿ’ – ಇವುಗಳಲ್ಲೆಲ್ಲಾ ಕಾರ್ನಾಡರ ‘ತಲೆದಂಡ’ ನಾಟಕವು ವಿಶಿಷ್ಟ ಸ್ಥಾನ ಪಡೆದಿದೆ. ಹನ್ನೆರಡನೆಯ ಶತಮಾನವು ಸಾಮಾಜಿಕ ಧೃವೀಕರಣದತ್ತ ಸಾಗುವ ಪ್ರಕ್ರಿಯೆಯ ಪರಿಚಯವೇ ಈ ‘ತಲೆದಂಡ’ ನಾಟಕ. ಇಂದಿನ ಮೌಲ್ಯಾತ್ಮಕ ನೆಲೆಗಟ್ಟಿನಲ್ಲಿ ನಿಂತು ಈ ಪ್ರಕ್ರಿಯೆಯ ಸಾಧಕ ಬಾಧಕಗಳನ್ನು ಪರಿಶೀಲಿಸಿ ನೋಡುವ ಸೃಜನಶೀಲ ಪ್ರಯತ್ನವನ್ನು ಈ ನಾಟಕದಲ್ಲಿ ಕಾಣಬಹುದು. ಇತಿಹಾಸದೊಂದಿಗೆ ಮುಖಾಮುಖಿಯಾಗುತ್ತಲೇ ಅಂದಿನ ಕಾಲದ ಸಾಮಾಜಿಕ ಪಲ್ಲಟಗಳನ್ನು ಗುರುತಿಸಿ ಪ್ರತಿಕ್ರಿಯಿಸುವ ಅಭಿವ್ಯಕ್ತಿಯನ್ನು ಈ ನಾಟಕ ಒಳಗೊಂಡಿದೆ. ಕಾರ್ನಾಡರು ವರ್ತಮಾನದ ಯಾವುದೇ ರಾಜಕೀಯ ಸಿದ್ಧಾಂತದ ಅಧೀನಕ್ಕೆ ಒಳಗಾಗದೆ ಇಡೀ ವಸ್ತುವನ್ನು ನಿರೂಪಿಸುತ್ತಾ ಸಾಗಿದ್ದಾರೆ. ಈ ಗುಣದಿಂದಾಗಿಯೇ ಈ ನಾಟಕಕ್ಕೆ ಒಂದು ಗಟ್ಟಿಯಾದ ನೆಲೆ ಪ್ರಾಪ್ತವಾಗಿದೆ.

ಕಾರ್ನಾಡರಿಗೂ ಮುನ್ನ ಸುಮಾರು ಐವತ್ತು ವರ್ಷಗಳ ಹಿಂದೆ ದ.ರಾ. ಬೇಂದ್ರೆಯವರು ಬಸವಣ್ಣ–ಬಿಜ್ಜಳರ ಯುಗವನ್ನು ಕುರಿತು ‘ತಲೆದಂಡ’ ಹೆಸರಿನ ನಾಟಕ ಬರೆಯುವ ಆಲೋಚನೆ ಮಾಡಿದ್ದರಂತೆ, ಆದರೆ ಅದು ಕೃತಿಗಿಳಿದಿರಲಿಲ್ಲ. ಅನಂತರದಲ್ಲಿ ಕಾರ್ನಾಡರು ಆ ಶೀರ್ಷಿಕೆಯನ್ನು ಪಡೆದು ತಾವು ನಾಟಕ ಬರೆದದ್ದಾಗಿ ಸ್ವತಃ ತಮ್ಮ ನಾಟಕದ ಆರಂಭದಲ್ಲಿ ಹೇಳಿಕೊಂಡಿದ್ದಾರೆ. ಹೀಗೆ ನಾಟಕ ಬರೆಯುವುದಕ್ಕೂ ಮೊದಲೇ ಈ ವಸ್ತು ವಿಷಯವನ್ನಾಧರಿಸಿ ಹಲವಾರು ನಾಟಕ, ಕಾದಂಬರಿಗಳು ಬಂದಿದ್ದರೂ ಸಹ ಈ ವಸ್ತು ತಮ್ಮನ್ನೇಕೆ ಆಕರ್ಷಿಸಿತು ಎಂಬುದನ್ನು ಕಾರ್ನಾಡರೇ ‘ತಲೆದಂಡ’ ನಾಟಕದ ತಮ್ಮ ‘ಲೇಖಕನ ನುಡಿ’ ಭಾಗದಲ್ಲಿ ಹೀಗೆ ವಿವರಿಸುತ್ತಾರೆ : ‘‘ನೋಯುವ ಹಲ್ಲಿಗೆ ನಾಲಿಗೆ ಮತ್ತೆ ಮತ್ತೆ ಹೊರಳುವಂತೆ ಪ್ರತಿಯೊಬ್ಬ ಕನ್ನಡಿಗ ಮತ್ತೆ ಮತ್ತೆ ಆ ಯುಗದ ಬೆರಗುಗೊಳಿಸುವ ಪ್ರತಿಭೆಗೆ, ಆ ಉತ್ಸಾಹಕ್ಕೆ, ಮೌಲಿಕ ಪ್ರಶ್ನೆಗಳನ್ನು ಕೇಳುವ ಎದೆಗಾರಿಕೆಗೆ, ಗೆಲುವಿಗೆ, ನೋವಿಗೆ ಮರಳುವದು, ಅದನ್ನು ಹೊಸ ಸಂದರ್ಭದಲ್ಲಿ ಅರ್ಥೈಸಲು ಯತ್ನಿಸುವುದು ಅನಿವಾರ್ಯ.’’[1]– ಎಂಬ ಈ ಮಾತು ಅವರ ವರ್ತಮಾನದ ಕಾಳಜಿಯನ್ನು ವ್ಯಕ್ತಪಡಿಸುವಂತಿದೆ.

ಉತ್ತರ ಕರ್ನಾಟಕದ ಆಡುಭಾಷಾ ಶೈಲಿಯಲ್ಲಿ ರಚಿತವಾಗಿರುವ ‘ತಲೆದಂಡ’ ನಾಟಕವು ಮೂರು ಅಂಕಗಳು, ಹದಿನಾರು ದೃಶ್ಯಗಳಿಂದ ಕೂಡಿದೆ. ಮೊದಲ ಎರಡು ಅಂಕಗಳಲ್ಲಿ ಕೇವಲ ಆರು ದೃಶ್ಯಗಳು, ಇನ್ನುಳಿದಂತೆ ಮೂರನೆಯ ದೃಶ್ಯದಲ್ಲಿ ಒಟ್ಟು ಹತ್ತು ದೃಶ್ಯಗಳು ನಿರೂಪಿತವಾಗಿದ್ದು ಸಾಂಬಶಿವ ಶಾಸ್ತ್ರಿಗಳ ಸಾವಿನ ಚಿತ್ರಣದೊಂದಿಗೆ ಆರಂಭವಾಗುತ್ತದೆ. ಬಸವಣ್ಣ ಬಿಜ್ಜಳನ ಆಸ್ಥಾನದಲ್ಲಿ ಕರ್ತವ್ಯನಿರತನಾಗಿರುವ ಅವನ ಮೇಲೆ ಹಲವಾರು ಅಪವಾದಗಳು ಬರುತ್ತವೆ. ಅವುಗಳನ್ನು ಬಸವಣ್ಣ ಶಾಂತ ಮನಸ್ಸಿನಿಂದಲೇ ಸ್ವೀಕರಿಸಿ ಧೈರ್ಯದಿಂದಲೇ ಎದುರಿಸುತ್ತಾನೆ. ಈ ನಾಟಕವು ಸೋವಿದೇವನ ಅರಾಜಕ ಹಿಂಸಾಚಾರಗಳ ಮುನ್ಸೂಚನೆಯೊಂದಿಗೆ ಮುಕ್ತಾಯ ಹೊಂದುತ್ತದೆ. ಒಟ್ಟಾರೆ ಕಲ್ಯಾಣದಲ್ಲಿ ಹರಳಯ್ಯನ ಮಗ ಶೀಲನಿಗೂ ಮಧುವರಸನ ಮಗಳು ಕಲಾವತಿಗೂ ನಡೆಯುವ ಅಂತರ್ ಜಾತಿಯ ವಿವಾಹವೇ ಈ ನಾಟಕದ ಕೇಂದ್ರವಸ್ತುವಾಗಿದ್ದುಕಲ್ಯಾಣದ ಕ್ರಾಂತಿಗೆ ಕಾರಣವಾಗುತ್ತದೆ. ಈ ವಿವಾಹದಿಂದುಂಟಾಗುವ ಗಲಭೆಗಳು, ಬಿಜ್ಜಳನ ಪದಚ್ಯುತಿ ಮತ್ತು ಕೊಲೆ, ಬಸವಣ್ಣನು ಕೂಡಲ ಸಂಗಮಕ್ಕೆ ತೆರಳುವುದು, ಅಂತಿಮವಾಗಿ ಶರಣರ ಕ್ರಾಂತಿಯು ಭಯಂಕರ ಹಿಂಸೆ – ಸೋಲುಗಳನ್ನು ಕಾಣುವುದು, ಇಲ್ಲಿ ಬಿಜ್ಜಳನ ಸಾವು ಮತ್ತು ಬಸವಣ್ಣನ ಸೋಲನ್ನು ‘ತಲೆದಂಡ’ಎಂದು ಸಂಕೇತಿಸಬಹುದು.ಆ ಕಾಲದ ಬಸವಣ್ಣ ಮತ್ತು ಶರಣತತ್ವವನ್ನು ಕುರಿತಾಗಿರುವ ಈ

[1] ‘ತಲೆದಂಡ’ : ಗಿರೀಶ ಕಾರ್ನಾಡ : ನಾಟಕ ಕೃತಿಯಲ್ಲಿನ – (ಲೇಖಕರ ನುಡಿ)

ನಾಟಕವು ಎರಡು ತಲೆಮಾರುಗಳ ಕಥೆಯೂ ಕೂಡ ಆಗಿದೆ. ಇದರಲ್ಲಿ ಆ ಕಾಲದ ಉತ್ಸಾಹ, ಎದೆಗಾರಿಕೆ, ಪರಿವರ್ತನೆಯ ಭಾವನೆಯನ್ನು ಕೂಡ ಈ ನಾಟಕದಲ್ಲಿ ಕಾಣಬಹುದು.

ಈ ನಾಟಕದ ಮೊದಲ ಅಂಕವುಕಲ್ಯಾಣದ ಅಗ್ರಹಾರದ ವೈದಿಕರಾದ ಸಾಂಬ ಶಿವಶಾಸ್ತ್ರಿಗಳ ಮನೆಯಲ್ಲಿ ಶಾಸ್ತ್ರಿಗಳು ಅನಾರೋಗ್ಯದಿಂದ ಹಾಸಿಗೆ ಹಿಡಿದು ಮಲಗಿರುವ ದೃಶ್ಯದೊಂದಿಗೆ ಆರಂಭವಾಗುತ್ತದೆ. ಶಾಸ್ತ್ರಿಗಳ ಮಗ ಜಗದೇವ ಬಸವಣ್ಣನ ವೈಚಾರಿಕತೆಯಿಂದ ಪ್ರಭಾವಿತನಾಗಿ ಶರಣ ಧರ್ಮವನ್ನು ಅನುಸರಿಸಿ ತನ್ನ ಸಾಂಪ್ರದಾಯಕವಾದ ಕೌಟುಂಬಿಕ ಹೊಣೆಗಾರಿಕೆಯನ್ನು ಕಡೆಗಣಿಸಿ ಬಸವಣ್ಣನೊಂದಿಗೆ ಸಾಮಾಜಿಕ ಕಾರ್ಯಗಳಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದನು.ತನ್ನ ಸ್ನೇಹಿತನಾದ ಮಾದಿಗರ ಮಲ್ಲಿಬೊಮ್ಮನುಒಮ್ಮೆ ಜಗದೇವನ ಮನೆಯ ಒಳಗಡೆ ಬರಲು ತಾನು ಕೆಳಜಾತಿಯವನೆಂದು ಹಿಂಜರಿಯುತ್ತಿದ್ದಾಗ ಬಸವಣ್ಣನ ಜಾತ್ಯಾತೀತ ತತ್ತ್ವದ ಅನುಯಾಯಿಯಾದ ಜಗದೇವ, ಅವನಿಗೆ ಒಳಗೆ ಬರಲು ಒತ್ತಾಯಿಸಿ ಸಫಲನಾಗುತ್ತಾನೆ. ಜೊತೆಗೆ ಶಾಸ್ತ್ರಿಗಳು ಸಾಯುವ ಸಂದರ್ಭವು ಕ್ರಾಂತಿಯ ಮುನ್ಸೂಚನೆಯ ಪ್ರತಿಮೆಯಂತಿದೆ. ಸಾಂಪ್ರದಾಯಿಕತೆಯ ಮಿತಿಗಳ ಅಳಿವಿನೊಂದಿಗೆ ಹೊಸ ತಲೆಮಾರಿನ ಜಗದೇವನಂತಹ ಮನಸ್ಸುಗಳು ಸ್ವತಂತ್ರವಾಗಿ ಅರಳುವ ಸಾಧ್ಯತೆಯನ್ನು ಇಲ್ಲಿಯೇ ಊಹಿಸಬಹುದಾಗಿದೆ. ಬಸವಣ್ಣ ಭಂಡಾರದ ಹಣ ಬಳಸಿ ಅನ್ನ ದಾಸೋಹ ಮಾಡುತ್ತಿರುವನೆಂಬ ಸಂಶಯದೊಂದಿಗೆ ಬಿಜ್ಜಳನ ಮಗನಾದ ಸೋವಿದೇವನು ಬಸವಣ್ಣನು ಭಂಡಾರದಲ್ಲಿ ಇಲ್ಲದ ವೇಳೆ ಭಂಡಾರ ತೆಗೆಸುವ ಪ್ರಯತ್ನ ಮಾಡುತ್ತಾನೆ.ವಾಸ್ತವವೆಂದರೆ ಶರಣರು ಕಾಯಕವೇ ಕೈಲಾಸವೆಂದು ಭಾವಿಸಿ ದುಡಿದ ಹಣದಲ್ಲಿ ತಮಗೆ ಅಗತ್ಯವಿರುವಷ್ಟು ಮಾತ್ರವೇ ಇಟ್ಟುಕೊಂಡು ಉಳಿದುದನ್ನು ಬಸವಣ್ಣನಿಗೆ ನೀಡುತ್ತಿದ್ದರು. ಇದರಿಂದ ಬಸವಣ್ಣ ಅನ್ನದಾಸೋಹ ಮಾಡುತ್ತಿದ್ದನು. ಆದರೆ ಇದನ್ನರಿಯದ ಸೋವಿದೇವನು ತನ್ನ ಅಜ್ಞಾನದಿಂದ ಭಂಡಾರದ ತನಿಖೆ ನಡೆಸುತ್ತಾನೆ.ಸೋವಿದೇವ ಇಲ್ಲಿ ತಪ್ಪು ಮಾಡಿದರೂ ಕೂಡ ಇಲ್ಲಿ ರಂಭಾವತಿ ಮಮತೆಯಿಂದ ತನ್ನ ಮಗನ ಪರ ವಹಿಸುತ್ತಾಳೆ. ಬಿಜ್ಜಳನಿಗೂ ಕೂಡ ಮಗನ ಮೇಲೆ ಪ್ರೀತಿ ಇದ್ದರೂ ಬಸವಣ್ಣನ ಮೇಲೂ ಗೌರವವಿರುವುದು. ಇಲ್ಲಿ ಬಿಜ್ಜಳ ತನ್ನ ಮಗನನ್ನು ಬೈಯುವುದರ ಮೂಲಕ ಅವನ ಪಾತ್ರ ಆರಂಭವಾಗುವುದನ್ನು ಕಾಣಬಹುದು. ಬಿಜ್ಜಳ ರಂಭಾವತಿಗೆ ಮತ್ತು 'ಬಸವಣ್ಣನ ಲೆಕ್ಕ ಅದು ಬ್ರಹ್ಮಲಿಖಿತ ಒಮ್ಮೆ ಬರೆದರೆ ಅದು ಅಳಿಸಲು ಆಗುವುದಿಲ್ಲ' ಎಂದು ಹೇಳುವುದು ಬಿಜ್ಜಳನಿಗೆ ಬಸವಣ್ಣನ ಮೇಲೆ ಎಷ್ಟು ನಂಬಿಕೆ, ಗೌರವವಿದೆ ಎಂಬುದನ್ನು ತಿಳಿಸುವುದು ಜೊತೆಗೆ ಬಿಜ್ಜಳ ತನ್ನ ವಂಶದ ಬಗ್ಗೆಯೂ ಮಾತನಾಡುತ್ತಾನೆ. ಇಲ್ಲಿ ಬಿಜ್ಜಳ ಕ್ಷೌರಿಕನಾಗಿದ್ದು, ನಂತರ ಅರಸನಾದವನು. ಆದ್ದರಿಂದ ತನ್ನ ಜಾತಿಯನ್ನು ತಾನು ಮತ್ತು ಜನರು ಮರೆತಿಲ್ಲವೆಂಬುದನ್ನು ತಿಳಿಸುತ್ತಾನೆ. ಆದರೆ ಸೋವಿದೇವ ಹುಟ್ಟಿನಿಂದಲೇ ಅರಸನ ಪುತ್ರ ಎನಿಸಿಕೊಂಡವನು. ಹೀಗಾಗಿ ತನ್ನ ತಂದೆಯನ್ನು ಕಾಡಿದ ಕೀಳರಿಮೆ, ಸವಾಲು, ಸಂಘರ್ಷಗಳ ಅನುಭವದ ಅರಿವಿಲ್ಲದೆ ಬೆಳೆದವನು. ಹಾಗೆಯೇ ಜಗದೇವನು ಬಸವಣ್ಣನಂತೆಯೇ ಬ್ರಾಹ್ಮಣ ಧರ್ಮವನ್ನು ಬಿಟ್ಟು ಶರಣನಾದವನಾದರೂ ಬಸವಣ್ಣನಿಗೆ ಎದುರಾದ ಸಮಸ್ಯೆಗಳು, ಅವನ ತೊಳಲಾಟ, ಹುಡುಕಾಟಗಳ ಅವಶ್ಯಕತೆ ಅವನಲ್ಲಿ ಕಾಣುವುದಿಲ್ಲ. ಆತ ಬಸವಣ್ಣನನ್ನು ಆದರ್ಶವಾಗಿ ಸ್ವೀಕರಿಸಿದ್ದಾನೆ. ಆದ್ದರಿಂದ ಅದು ಆತನಿಗೆ ತನ್ನ ಅನುಭವದಿಂದ ಹುಟ್ಟಿದ ವೈಚಾರಿಕತೆಯಲ್ಲ ಬದಲಾಗಿ ಒಂದು ಸಿದ್ಧತತ್ತ್ವವನ್ನು ಸ್ವೀಕರಿಸಿದ್ದರ ಪರಿಣಾಮವಾಗಿ ಗ್ರಹಿಸಲ್ಪಟ್ಟ ತಿಳುವಳಿಕೆಯಾಗಿದೆ.

ಸಂಶಯಗ್ರಸ್ಥ ಸೋವಿದೇವನ ನೇತೃತ್ವದಲ್ಲಿ ನಡೆದ ಭಂಡಾರದ ತನಿಖೆಯಲ್ಲಿ 'ಒಂದು ದುಗ್ಗಾಣಿ'ಯೂ ವ್ಯತ್ಯಾಸವಾಗಿಲ್ಲವೆಂದು ತಿಳಿದ ಕೂಡಲೇ ಬಸವಣ್ಣನ ತಲೆಯ ಮೇಲೆ 'ಪವಾಡ'ದ ಕೀರ್ತಿ ಹೊರಿಸಿ ಅವನ ಭಕ್ತರು ಸಂಭ್ರಮಿಸುತ್ತಾರೆ. ಈ ಭಂಡಾರದ ಪ್ರಸಂಗವು ಬಸವಣ್ಣನಲ್ಲಿ ತಾನು ನಡೆಯುತ್ತಿರುವ ಮಾರ್ಗದಲ್ಲಿ ಎಡವುತ್ತಿದ್ದೇನೆಂಬ ಅನುಮಾನವನ್ನು ಹುಟ್ಟು ಹಾಕುತ್ತದೆ. ಮೂರನೆಯ ದೃಶ್ಯದಲ್ಲಿಬಸವಣ್ಣ ಬಿಜ್ಜಳನನ್ನು ಕಾಣಲು ಅರಮನೆಗೆ ಬಂದಾಗ ವಂದಿ ಮಾದಿಗರು ಬಿಜ್ಜಳನ ಬಿರುದಾವಳಿಯನ್ನು ಹೇಳುವ ಸಂದರ್ಭದಲ್ಲಿ ಬಿಜ್ಜಳನು 'ಹ್ಯಾಂಗೈತಿ ನಮ್ಮ ಹೊಸ ಬಿರುದಾವಳಿ?' ಎಂದಾಗ, 'ಸ್ವಲ್ಪ ಸಂಸ್ಕೃತ ಹೆಚ್ಚಾತೋ ಏನೋ' ಎಂದು ಬಸವಣ್ಣ ಕೀಟಲೆ ಮಾಡುತ್ತಾನೆ. ಆಗ ಮಂಚ್ಯಣ ಕ್ರಮಿತನು 'ಸಂಸ್ಕೃತಕ್ಕಿರೋ ಘನತೆ ಗಾಂಭೀರ್ಯ ಕನ್ನಡಕ್ಕೆ ಹ್ಯಾಂಗ ಬಂದೀತು?' ಎನ್ನುತ್ತಾನೆ. ಇಲ್ಲಿ ಕನ್ನಡ ಭಾಷೆ ಪರಭಾಷೆಯಿಂದ ಎದುರಿಸುತ್ತಿರುವ ಅವಹೇಳನದ ಸ್ಥಿತಿಯನ್ನು ಕಾಣಬಹುದು.ಹಾಗೆಯೇ ದಾಮೋದರಭಟ್ಟನು, "ಅದು ಈ ನಾಲಿಗೀ ಚಪಲ, ಇಂದ್ರಾಣಿ. ಸಂಸ್ಕೃತ ವಜ್ರದೊಳಗೆ ಕಡೆದಿಟ್ಟ ವಾಣಿ. ಸಹಸ್ರಾರು ವರ್ಷಗಳಾದವು ಅದರ ವ್ಯಾಕರಣದಲ್ಲಿ ಒಂದು ನಿಯಮ ಬದಲಾಗಿಲ್ಲ. ಪ್ರತ್ಯಯ ಕಳಚಿಬಿದ್ದಿಲ್ಲ. ಅದಕ್ಕ ಸಂಸ್ಕೃತದಲ್ಲಿ ಶಾಶ್ವತ ಸತ್ಯಗಳನ್ನು ಹಿಡಿದು ಹೇಳೋದು ಸಾಧ್ಯ. ಕನ್ನಡ ಮಾತು ಹಾಂಗಲ್ಲ. ಅದು ಬಾಯಿಂದ ಬಾಯಿಗೆ ಜಾತಿಯಿಂದ ಜಾತಿಗೆ ಇಂದಿನಿಂದ ನಾಳೆಗೆ ಬದಲಾಗೋದು, ಅದು ಇರೋಧ ಗಂಡ–ಹೆಂಡಿರು ಜಗಳ ಆಡೋದಕ್ಕೆ, ತಿರುಕರು ಬಿಕ್ಕೆ ಬೇಡೋದಕ್ಕ, ವೇಶ್ಯೆಯರು ಸೆರಗು ಹಾಸೋದಕ್ಕ. ಅದು ಶೀಘ್ರ ವ್ಯಸನ ಆಗತದದು. ನನಗೂ ಆಗೇದ, ಅದನ್ನ ಈ ತಲೆಹಿಡುಕ ಶರಣರು ಸಮಾಜದ ಭ್ರಷ್ಟಾಚಾರಕ್ಕಾಗಿ ಬಳಸಿಕೋತಾರ.........'' ಎನ್ನುತ್ತಾನೆ. ಮಂಚ್ಯಣಕ್ರಮಿತ ಪಂಡಿತನಾದ್ದರಿಂದ ಅವನಿಗೆ ಸಂಸ್ಕೃತವೇ ಶ್ರೇಷ್ಠವೆನಿಸುವುದು ಸಹಜ. ಈ ಮಾತುಗಳು ಕನ್ನಡ ಭಾಷೆಯ ಬಗೆಗೆ ಇತರ ವಿದ್ವಾಂಸರಿಗೆ ಇರುವ ಅಭಿಪ್ರಾಯ, ಹೀಯಾಳಿಕೆಯನ್ನು ಗುರುತಿಸಬಹುದು. ಹೀಗೆ ಇಡೀ ನಾಟಕವು ಕೇವಲ ಸಾಮಾಜಿಕ ಸುಧಾರಣೆ ಮಾತ್ರವಲ್ಲದೆ ರಾಜಕೀಯ, ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ಭಾಷಿಕ ಸುಧಾರಣೆಗಳ ಕಡೆಗೂ ಬೆಳಕು ಚೆಲ್ಲುತ್ತದೆ. ಬಿಜ್ಜಳ ಬಸವಣ್ಣನ ಮುಂದೆ ತನ್ನ ಮಗ ತಪ್ಪು ಮಾಡಿದರೂ ಕೂಡ ಅವನು ನನ್ನ ಮಗನೆಂದು ಹೇಳುತ್ತಾನೆ. ತಂದೆಗೆ ಮಕ್ಕಳ ಮೇಲೆ ವ್ಯಾಮೋಹ ಇರುವಂತೆ ಬಿಜ್ಜಳನಿಗೂ ತನ್ನ ಮಗನ ಮೇಲೆ ವ್ಯಾಮೋಹವಿದೆ."ರಾಜ್ಯ, ಸಾಮ್ರಾಜ್ಯ ಇಹ–ಪರ ಎಲ್ಲ ಯಾರ ಸಲುವಾಗಿ? ಮಗನ ಸಲುವಾಗಿ ಕೊನೆಗೆ ಉಳಿಯೋದೇನು? ಪುತ್ರ ಸಂತಾನ'' ಎಂದು ಬಿಜ್ಜಳ ಬಸವಣ್ಣನಿಗೆ ತಿಳಿಸುತ್ತಾನೆ. ಈ ಮಾತುಗಳು ಬಿಜ್ಜಳನು ಸಾಂಪ್ರದಾಯಿಕ ನೆಲೆಗಟ್ಟಿನ ಪರಿಧಿಯೊಳಗೆ ಬದುಕುತ್ತಿದ್ದಾನೆಂಬುದನ್ನು ತಿಳಿಸುತ್ತವೆ. ಈ ಮೂಲಕ ಬಿಜ್ಜಳ ಬಸವಣ್ಣನಿಗೆ ಬದುಕಿನ ವಾಸ್ತವತೆಯನ್ನು ವಿವರಿಸುವ ಪ್ರಯತ್ನ ಮಾಡುತ್ತಾನೆ. ಬಸವಣ್ಣ ಬಿಜ್ಜಳನಿಗೆ ಇಂದಲ್ಲ ನಾಳೆ ಈ ಋಣಾನುಬಂಧವೆನ್ನುವುದು ಮುಗಿಯುವುದು ಇದಕ್ಕೆ ಸೋವಿದೇವನ ಭಂಡಾರದ ತನಿಖೆ ಒಂದು ನೆಪವಾಯಿತು ಎನ್ನುತ್ತಾನೆ. ಇಲ್ಲಿ ಬಸವಣ್ಣ ಒಬ್ಬ ಶರಣನಾಗಿದ್ದು, ಇವನು ರಾಜನನ್ನು ನಂಬಿ ಬದುಕುತ್ತಿರುವವನಲ್ಲ. ಆದ್ದರಿಂದ ಬದುಕಿನಲ್ಲಿ ಯಾವುದು ಶಾಶ್ವತವಲ್ಲ. ಇಂದಲ್ಲ ನಾಳೆ ಎಲ್ಲವನ್ನು ಕಳೆದುಕೊಳ್ಳಬಹುದು. ಅದು ಅಧಿಕಾರ, ಸಂಪತ್ತು, ಸಂಬಂಧ ಎಲ್ಲವೂ ಅಷ್ಟೇ ಎಂದು ಅಭಿಪ್ರಾಯಿಸುತ್ತಾನೆ. ಜನರು ಬಸವಣ್ಣ ಒಬ್ಬ ಪವಾಡಪುರುಷನೆಂದು ನಂಬುತ್ತಾರೆ. ಭಂಡಾರದ ಹಣವನ್ನು ಶಿವ ತುಂಬಿದನು ಎಂದು ಭಾವಿಸುತ್ತಾರೆ. ಆದರೆ ಬಸವಣ್ಣ ಒಬ್ಬ ಪವಾಡಪುರುಷನೆಂಬುದಕ್ಕಿಂತ ಅವನು ವಿಚಾರವಾದಿಯಾಗಿರುವುದನ್ನು ನಾವು ಅರಿಯಬೇಕು. ಬಿಜ್ಜಳ ಬಸವಣ್ಣನನ್ನು ಕುರಿತು " ನಿನ್ನ ಶರಣ ಸಮಾಜಕ್ಕೆ 'ಭಕ್ತಿಭಂಡಾರಿ ಬಸವಣ್ಣ' ಬೇಕು. ನೀನು 'ಪವಾಡ ಪುರುಷ ಬಸವಣ್ಣ' ಆಗೋದು ಬೇಕು. ಅದರ ಸಲುವಾಗಿ ನಿನ್ನನ್ನ 'ಕಳ್ಳ ಬಸವಣ್ಣ' ಅಂತ ಕರಿಯಾಕು ಹಿಂದುಮುಂದು ನೋಡಾಕಿಲ್ಲ'' ಎನ್ನುತ್ತಾಜನರು ಸಂದರ್ಭಕ್ಕೆ ತಕ್ಕಂತೆ ತಮ್ಮ ವರ್ತನೆಯನ್ನು ಬದಲಾಯಿಸುತ್ತಾರೆ ಎಂಬ ಬದುಕಿನ ಮಾರ್ಮಿಕತೆಯನ್ನು ತಿಳಿಸುವ ಪ್ರಯತ್ನ ಮಾಡುತ್ತಾನೆ.

ನಾಟಕದ ಎರಡನೇ ಅಂಕದಲ್ಲಿ ಬಸವಣ್ಣನಿಗೆ ತಿಳಿಯದೆ ಅಂತರ್‌ಜಾತಿ ವಿವಾಹ ಪ್ರಸ್ತಾಪ ಬರುತ್ತದೆ. ಈ ವಿವಾಹವೇ ಕಲ್ಯಾಣ ಕ್ರಾಂತಿಗೆ ಕಾರಣವಾಗುವುದನ್ನು ನೋಡಬಹುದು. ಇದರ ಪರಿಣಾಮವೇ ಬಿಜ್ಜಳನ ಸಾವು, ಕೆಲವು ಶರಣರ ಸಾವು ಕೂಡ ಸಂಭವಿಸುವುದು. "ನಾವು ಆಡಿದ್ದು ಬಯಸಿದ್ದು ಹೀಂಗ ಇದ್ದಕಿದ್ದಾಂಗ ನನಸಾಗತದ ಅನಿಸಿದ್ದಿಲ್ಲ ಶಿವಭೋ ಅನಿಸಿತು. ಆದರೆ ಅದೇ ವ್ಯಾಖ್ಯಾಕ ಯಾಕೋ....... ಹೆದರಿಕೆ ಆತು.'' — ಎಂಬ ಬಸವಣ್ಣನ ಈ ಮಾತುಗಳಲ್ಲಿ ಬಸವಣ್ಣನಿಗೆ ಇಂತಹ

ವಿವಾಹವಾಗಬೇಕೆಂಬ ಆಶಯವಿತ್ತು ಎಂಬುದು ಸ್ಪಷ್ಟವಾಗುತ್ತದೆ. ಆದರೆ ಆತ ಇದು ಇಷ್ಟು ಬೇಗ ನನಸಾಗುತ್ತದೆಯೆಂದು ತಿಳಿದಿರಲಿಲ್ಲ. ಅಲ್ಲದೆ ಅದರಿಂದಾಗುವ ಗಲಭೆಗಳ ಬಗೆಗೂ ಬಸವಣ್ಣನಿಗೆ ಆತಂಕವಿದೆ ಎಂದು ತಿಳಿಯುತ್ತದೆ. ಬ್ರಾಹ್ಮಣರಾದ ಮಧುವರಸ-ಲಲಿತಾಂಭಾ, ಸಮಗಾರರಾದ ಹರಳಯ್ಯ, ಕಲ್ಯಾಣಿ ತಮ್ಮ ಮಕ್ಕಳಾದ ಶೀಲ ಮತ್ತು ಕಲಾವತಿಯರ ಮದುವೆ ಪ್ರಸ್ತಾಪವನ್ನು ಹೊತ್ತು ಬರುತ್ತಾರೆ. ಈ ವಿಚಾರ ತಿಳಿದೊಡನೆ ಬಸವಣ್ಣ ಮೌನವಾಗುತ್ತಾನೆ. ಇಲ್ಲಿ ಬಸವಣ್ಣ ಈ ವಿಚಾರ ತಿಳಿದೊಡನೆ ಸಂತೋಷಪಟ್ಟು ಅವರಿಗೆ ಆಶೀರ್ವಾದ ಏಕೆ ಮಾಡಲಿಲ್ಲವೆಂಬ ಪ್ರಶ್ನೆ ಮೂಡುವುದು. ಆದರೆ ಬಸವಣ್ಣ ಮುಂದೆ ಇದರಿಂದ ಆಗುವ ಪರಿಣಾಮದ ಬಗ್ಗೆ ಯೋಚಿಸಿ ಈ ಎರಡು ಕುಟುಂಬಗಳಿಗೆ ಎಚ್ಚರಿಕೆ ನೀಡುವುದನ್ನು ಕಾಣುತ್ತೇವೆ.

ಬಸವಣ್ಣ ಹರಳಯ್ಯನ ಜೊತೆ ಮಾತನಾಡುತ್ತ ಶೀಲ ಮತ್ತು ಕಲಾವತಿ ಇಬ್ಬರನ್ನೂ ಮದುವೆ ಮಾಡಿದ ನಂತರ ಬೇರೆ ಊರಿಗೆ ಕಳುಹಿಸಬೇಕೆಂದು ಮಾತು ಪಡೆಯುತ್ತಾನೆ. ಬಿಜ್ಜಳ ಪ್ರಾರಂಭದಲ್ಲಿ ಈ ವಿವಾಹವನ್ನು ಒಪ್ಪುವುದಿಲ್ಲ. 'ಈ ಲಗ್ನ ಆದರ ಸವರ್ಣೀಯರು ಸುಮ್ಮಕ ಕುಂಡ್ರೂದಿಲ್ಲ ಲಗ್ನ ಮಂಟಪ ರಣರಂಗ, ಆಕ್ಕೇತಿ, ಕಲ್ಯಾಣದ ಬೀದ್ಯಾಗ ಹೆಣ ಬೀಳತಾವು?' ಎಂಬ ಎಚ್ಚರಿಕೆಯನ್ನು ಬಸವಣ್ಣನಿಗೆ ನೀಡುತ್ತಾನಾದರೂ ಕೊನೆಗೆ ಈ ಮದುವೆಗೆ ಒಪ್ಪಿ ಅವರಿಗೆ ರಕ್ಷಣೆಯನ್ನು ನೀಡುತ್ತಾನೆ. ಶೀಲ–ಕಲಾವತಿಯರ ಮದುವೆ ವೈದಿಕ ಧರ್ಮದ ಅನುಯಾಯಿಗಳಿಗೆ ಒಂದು ದೊಡ್ಡ ಆಘಾತವೆನ್ನಬಹುದು. ಇದಕ್ಕೆ ಬಿಜ್ಜಳ ಕೂಡ ಯಾವುದೇ ರೀತಿಯ ಪ್ರತಿಕ್ರಿಯೆ ನೀಡದೆ ಸುಮ್ಮನಾದ್ದರಿಂದದ್ದೀ ವಿವಾಹಕ್ಕೆ ಬಿಜ್ಜಳ ಪರೋಕ್ಷವಾಗಿ ಅನುಮತಿ ನೀಡಿದನೆಂದು ವೈದಿಕರು ಕೆರಳುತ್ತಾರೆ.ಸೋವಿದೇವನು ಶೀಲ–ಕಲಾವತಿ ವಿವಾಹಕ್ಕೆ ಯಾವುದೇ ಅಡ್ಡಿಯಾಗದೆ ಸುಮ್ಮನಿರುವುದನ್ನು ಕಂಡ ದಾಮೋದರಭಟ್ಟ ಬಿಜ್ಜಳನೇ ಶರಣರಿಗೆ ಗುಪ್ತರಕ್ಷಣೆ ನೀಡಿರುವುದು ಎಂದು ಹೇಳಿ ತಂದೆಯ ವಿರುದ್ಧವೇ ಮಗನಾದ ಸೋವಿದೇವನನ್ನುಎತ್ತಿಕಟ್ಟುವನು. ಬಿಜ್ಜಳನನ್ನು ಸೋವಿದೇವ, ದಾಮೋದರಭಟ್ಟ ಎಲ್ಲರೂ ಸೇರಿ ತಂತ್ರ ಹೂಡಿ ಗೃಹಬಂಧನದಲ್ಲಿರಿಸುತ್ತಾರೆ.

ತಲೆದಂಡ ನಾಟಕದಲ್ಲಿ ಹತ್ತನೇ ದೃಶ್ಯ ತುಂಬಾ ಪ್ರಮುಖವಾಗಿದೆ. ಸೋವಿದೇವ ತನ್ನ ತಂದೆಯಾದ ಬಿಜ್ಜಳನನ್ನು ಗೃಹ ಬಂಧನದಲ್ಲಿರಿಸಿದ್ದಾನೆ. ಇಲ್ಲಿ ಬಿಜ್ಜಳನಿಗೆ ಬಸವಣ್ಣ ಬರುತ್ತಾನೆಂಬ ನಂಬಿಕೆ ಇರುವುದು. ಅದೇ ರೀತಿ ಬಸವಣ್ಣ ಬಿಜ್ಜಳನನ್ನು ಕಾಣಲು ಬರುವುದನ್ನು ನೋಡುತ್ತೇವೆ. ಇಲ್ಲಿ ಇಬ್ಬರ ಸೌಹಾರ್ದ ಸಂಬಂಧವನ್ನು ಅರಿಯಬಹುದು. ಬಿಜ್ಜಳನಿಗೆ ಅದುವರೆಗೆ ಇದ್ದ ಆತಂಕವು ಬಸವಣ್ಣ ಬರುತ್ತಿದ್ದಾನೆಂದು ತಿಳಿದ ಮೇಲೆ ಮಾಯವಾಗಿ ಸಂತೋಷ ಉಂಟಾಗುವುದು.ಅನಂತರ ಮಂಚಣ್ಣಕ್ರಮಿತ ಮತ್ತು ದಾಮೋದರಭಟ್ಟ ಇಬ್ಬರೂ ಶೀಲ ಮತ್ತು ಕಲಾವತಿಯರ ಮದುವೆಗೆ ಭಾಗಿಯಾದವರನ್ನು ಕೊಲೆ ಮಾಡುವಂತೆ ಸೋವಿದೇವನನ್ನು ಪ್ರಚೋದಿಸುತ್ತಾರೆ. ಸೋವಿದೇವ ಶೀಲಾ ಮತ್ತು ಕಲಾವತಿಯ ಕುಟುಂಬದವರನ್ನು ಚಿತ್ರಹಿಂಸೆ ನೀಡಿ ಅವರನ್ನು ಕೊಲ್ಲಿಸುತ್ತಾನೆ. ಬಿಜ್ಜಳನ ಕೊಲೆ ಪ್ರಸಂಗವು ನಮ್ಮ ಕಣ್ಣಿಗೆ ಕಟ್ಟುವಂತೆ ಇದೆ. ಜಗದೇವ, ಮಲ್ಲಿಬೊಮ್ಮ ಸೇರಿದಂತೆ ಸೋವಿದೇವನನ್ನು ಕೊಲ್ಲಲು ಅರಮನೆಗೆ ನುಗ್ಗುತ್ತಾರೆ. ಆದರೆ ಸೋವಿದೇವ ಅರಮನೆಯಲ್ಲಿ ಇಲ್ಲದಿದ್ದಾಗ ಬಂದ ದಾರಿಗೆ ಸುಂಕವಿಲ್ಲವೆಂದು ಹೋದರೆ ಜನರು ಏನೆಂದುಕೊಳ್ಳುತ್ತಾರೆ ಎಂದು ಜಗದೇವ ಬಿಜ್ಜಳನನ್ನು ಕೊಲೆ ಮಾಡಲು ನಿರ್ಧರಿಸುತ್ತಾನೆ. ಆದರೆ ದುರ್ಬಲನಾದ, ನಿಸ್ಸಹಾಯಕನಾಗಿರುವ ಬಿಜ್ಜಳನನ್ನು ಕೊಲ್ಲಲು ಮುಂದಾದಾಗ ಬಿಜ್ಜಳನು ಶಿವಾಲಯದಲ್ಲಿ ಇರುತ್ತಾನೆ. ಆದರೆ ಬಸವಣ್ಣ ಕಪ್ಪಡಿಯಿಂದ ಕಳುಹಿಸಿದ್ದಾನೆಂದು ಜಗದೇವ ಸುಳ್ಳು ಹೇಳಿದನು. ಬಸವಣ್ಣನ ಹೆಸರು ಕೇಳಿದೊಡನೆ ಬಿಜ್ಜಳ ಶಿವಾಲಯದಿಂದ ಹೊರ ಬಂದಾಗ ಜಗದೇವ ಕತ್ತಿಯಿಂದ ಇರಿದು ಕೊಲ್ಲುವುದನ್ನು ಕಾಣಬಹುದು. ಬಿಜ್ಜಳ ಆ ಸಮಯದಲ್ಲಿ ಜಗದೇವನನ್ನು ಸೋವಿದೇವನೆಂದು ಭಾವಿಸಿ 'ಸೋವೀ. ಮಗನಾ.....' ಎಂದು ಅಪ್ಪಿಕೊಳ್ಳುತ್ತಾನೆ. ಜೊತೆಗೆ ಜಗದೇವ ತನ್ನನ್ನು ತಾನೇ ಇರಿದುಕೊಂಡು ಸಾಯುತ್ತಾನೆ.ಸೋವಿದೇವ ದಾಮೋದರಭಟ್ಟನನ್ನು ಕೂಡ ಕೊಲ್ಲಿಸಿ ಜೊತೆಗೆ ಶರಣರಿಗೆ ಚಿತ್ರಹಿಂಸೆ ನೀಡಲಾರಂಭಿಸಿದರಿಂದ ರಾಜಧಾನಿಯಲ್ಲಿ ಅರಾಜಕತೆ ಉಂಟಾಯಿತು.

ಪ್ರಾರಂಭದಲ್ಲಿ ಸಾಂಬಶಿವಶಾಸ್ತ್ರಿಯವರ ಸಾವು ವೈದಿಕ ಧರ್ಮದ ಅವನತಿಯನ್ನು ಸೂಚಿಸಿದರೆ, ನಂತರದಲ್ಲಿ ಹರಳಯ್ಯ, ಮಧುವರಸನ ಕುಟುಂಬದ ಸಾವು, ಬಿಜ್ಜಳನ ಸಾವು, ಕೊನೆಗೆ ದಾಮೋದರಭಟ್ಟ, ಅನೇಕ ಶರಣರ ಸಾವು ಹೀಗೆ ಹಿಂಸೆಯೆಂಬುದು ಬೆಳೆಯುತ್ತಲೇ ಹೋಗುತ್ತದೆ. ದಾಮೋದರಭಟ್ಟ ಸೋವಿದೇವನಿಗೆ ತಂದೆಯ ವಿರುದ್ಧ ನಿಲ್ಲುವಂತೆ ಮಾಡಿದನು. ಆದರೆ ಅಧಿಕಾರದಾಹ ಯಾರನ್ನೂ ಕೂಡ ಬಿಡದೇ ಬಲಿ ತೆಗೆದುಕೊಳ್ಳುತ್ತದೆಂಬುದಕ್ಕೆ ಸಾಕ್ಷಿಯಾಗಿ ದಾಮೋದರಭಟ್ಟನೂ ಕೂಡ ಸಾಯುತ್ತಾನೆ.

ರಾಜನಾದವನು ಜನರ ರಕ್ಷಣೆ ಮಾಡಬೇಕಾದವನು. ಆದರೆ ಇಲ್ಲಿ ಸೋವಿದೇವ ಭಕ್ಷಕನಾಗುತ್ತಾನೆ. ಸೋವಿದೇವನಿಗೆ ಪುರೋಹಿತರು ಸಿಂಹಾಸನದಲ್ಲಿ ಕೂರಿಸಿ ಬಹುಪರಾಕ್ ಹೇಳುತ್ತಿರುವಾಗ ಹಿನ್ನೆಲೆಯಲ್ಲಿ ಬೆಂಕಿ ಉರಿಯುತ್ತಲೇ ಇದೆ. ಅಂದರೆ ಈ ಸೋವಿದೇವನ ಆಳ್ವಿಕೆಯಿಂದ ರಾಜಧಾನಿಯು ಬೆಂಕಿಯಂತೆ ಉರಿದುಹೋಗುವುದನ್ನು ಸೂಚಿಸುತ್ತದೆ ಎಂಬ ಪ್ರಶ್ನೆ ಮೂಡುವುದು.

ಇಲ್ಲಿ ಬಿಜ್ಜಳ ಮತ್ತು ಬಸವಣ್ಣ ಇಬ್ಬರೂ ಕೂಡ ಐತಿಹಾಸಿಕ ವ್ಯಕ್ತಿಗಳಾಗಿದ್ದಾರೆ. ಇಲ್ಲಿ ಬಿಜ್ಜಳನ ಪಾತ್ರವು ಆರಂಭದಲ್ಲಿ ಮಗನ ಮೇಲೆ ಆರ್ಭಟದಿಂದ ಪ್ರಾರಂಭವಾಗುವುದನ್ನು ಕಾಣುತ್ತೇವೆ. ಆದರೆ ನಾಟಕದ ಕೊಲೆಯಲ್ಲಿ ಅವನಿಗೆ ಮಗನ ಮೇಲೆ ಪ್ರೀತಿ ಉಂಟಾಗುತ್ತದೆ. ಇಲ್ಲಿ ಬಸವಣ್ಣನೂ ಕೂಡ ಪ್ರಾರಂಭದಲ್ಲಿ ಕ್ರಿಯಾಶೀಲನಾಗಿರುತ್ತಾನೆ. ನಾಟಕದ ಕೊನೆಯ ವೇಳೆಗೆ ಅಸಹಾಯಕನಂತೆ ಕಂಡು ಬರುತ್ತಾನೆ. ಇಲ್ಲಿ ಬಸವಣ್ಣ ಬಿಜ್ಜಳ ಕಷ್ಟಕಾಲದಲ್ಲಿದ್ದಾಗ ಬಿಜ್ಜಳನನ್ನು ಶರಣರನ್ನು ಬಿಟ್ಟು ಪಲಾಯನಮಾಡಿದಂತೆ ಕಾಣುವುದು. "ಬಸವಣ್ಣನ ಭಿನ್ನ ವ್ಯಕ್ತಿತ್ವಗಳಿಂದ ಇಡೀ ಕ್ರಾಂತಿಯು ವೈಫಲ್ಯಗೊಳ್ಳುತ್ತದೆ. ಬಸವಣ್ಣ ಸಹಜವಾಗಿಯೇ ಸಬಲ ವ್ಯಕ್ತಿತ್ವದವನಾಗಿ ರೂಪುಗೊಳ್ಳಬೇಕಿತ್ತು. ಆದರೆ, ಬಿಜ್ಜಳನ ಪದವಿಯ ಹಂಗು ಮತ್ತು ತನ್ನ ಆದರ್ಶಕ್ಕೆ ವಿರುದ್ಧವಾದ ಬಿಜ್ಜಳನ ಅಧಿಕಾರದ ನಡವಳಿಕೆಗಳಿಂದಾಗಿ ಭಂಡಾರಿ ಪದವಿ ಮತ್ತು ರಾಜಧಾನಿಯನ್ನು ತೊರೆದು ನಿಷ್ಕ್ರಿಯನಾಗುತ್ತಾನೆ. ಸಾಮಾಜಿಕ ಕ್ರಾಂತಿಯು ಒಂದು ಮುಖ್ಯವಾದ ಹಂತವನ್ನು ತಲುಪಿದಾಗ, ಅದರ ಮುಖ್ಯ ನೇತಾರನೇ ಆ ಕ್ರಾಂತಿಗೆ ಬೆನ್ನು ಹಾಕಿ ಆಧ್ಯಾತ್ಮದ ವೇಷತೊಟ್ಟು ಅಸಹಾಯಕನಾಗುತ್ತಾನೆ, ಎನಿಸುತ್ತದೆ. ಉಳಿದ ಶರಣರೆಲ್ಲರೂ ನಾಯಕನಿಲ್ಲದೆ ತಮಗಿಷ್ಟ ಬಂದ ನಿರ್ಧಾರಗಳನ್ನು ಕೈಗೊಂಡು ಕ್ರಾಂತಿಯನ್ನು ಸಂಕಾಂತಿಯನ್ನಾಗಿಸದೆ, ಹಿಂಸಾಕ್ರಾಂತಿಯನ್ನಾಗಿಸುತ್ತಾರೆ. ಈ ಅಂಶವು ಸಹಾ ನಾಯಕನಲ್ಲಿರಬೇಕಾದ ಅರ್ಹತೆ, ಸಮಯಪ್ರಜ್ಞೆ ಮತ್ತು ಔಚಿತ್ಯ ಪ್ರಜ್ಞೆಯನ್ನು ಪ್ರಶ್ನಿಸುವಂತಿದೆ."[2] ಈ ಅನಿರೀಕ್ಷಿತ ತಿರುವು ಇಡೀ ನಾಟಕದ ವಸ್ತುವನ್ನು ಮತ್ತಷ್ಟು ಸೂಕ್ಷ್ಮ ಮತ್ತು ಗಂಭೀರಗೊಳಿಸುತ್ತದೆ. ತಲೆದಂಡ ನಾಟಕದಲ್ಲಿ ಧರ್ಮ, ಶರಣ ಧರ್ಮ, ಅಧಿಕಾರಕ್ಕಾಗಿ ತಂದೆ–ಮಕ್ಕಳ ಸಂಘರ್ಷವನ್ನು; ಪೀಳಿಗೆಗಳ ನಡುವಿನ ಸಾಂಪ್ರದಾಯಿಕ–ಆಧುನಿಕ ವಿಚಾರಗಳು, ಜಾತಿ–ಮತ ಈ ಸಂಘರ್ಷಗಳನ್ನು ಈ ತಲೆದಂಡ ನಾಟಕದಲ್ಲಿ ಕಾಣಬಹುದು. ಹೀಗೆ 'ತಲೆದಂಡ' ಕೃತಿಯು ಹಲವು ಆಯಾಮಗಳಲ್ಲಿ ತನ್ನ ಮಹತ್ವವನ್ನು ತೆರೆದು ತೋರುವ ಪ್ರಬುದ್ಧ ನಾಟಕವಾಗಿದೆ. ಸಮಕಾಲೀನ ಸಮಸ್ಯೆಗಳಿಗೆ ಇತಿಹಾಸದ ಘಟನೆಗಳನ್ನು ಮುಖಾಮುಖಿಯಾಗಿಸುತ್ತಾ ಬೆಳೆಯುತ್ತದೆ.

**ಪರಾಮರ್ಶನ ಕೃತಿಗಳು**

1. ಡಾ. ರಾಜು ಹೆಗಡೆ: ಗಿರೀಶ ಕಾರ್ನಾಡರ ಸಮಗ್ರ ನಾಟಕಗಳ ಸಮೀಕ್ಷೆ ಸಪ್ನ ಬುಕ್ ಹೌಸ್, ಬೆಂಗಳೂರು. 2007.
2. 2 ಸಂ. ಕೆ. ಮರುಳಸಿದ್ದಪ್ಪ ಮತ್ತು ಕೃಷ್ಣಮೂರ್ತಿ ಹನೂರು: ಗಿರೀಶ

[2] ಗಿರೀಶ್ ಕಾರ್ನಾಡರ ನಾಟಕಗಳು – ಒಂದು ಅಧ್ಯಯನ : ಡಾ. ಅನ್ನದಾನೇಶ್. ಪುಟ ಸಂಖ್ಯೆ : 229–230

ಕಾರ್ನಾಡರ ನಾಟಕಗಳು : ಕನ್ನಡದ ಪ್ರತಿಕ್ರಿಯೆ ಸಂವಹನ, ಮೈಸೂರು. 2010.

3. ಡಾ. ಅನ್ನದಾನೇಶ್ : ಗಿರೀ**ಶ್** ಕಾರ್ನಾಡರ ನಾಟಕಗಳು : ಒಂದು ಅಧ್ಯಯನ. ಅಂಕಿತ ಪುಸ್ತಕ, ಬೆಂಗಳೂರು. 2012.